ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರಲ್ಲಿ ಘಟಪ್ರಭಾ ಸೇತುವೆಯ ಶುಲ್ಕ ವಸೂಲಿ ಕುರಿತು

೧೨೩ (೩೧೬) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೪ನೇ ಸಂಖ್ಯೆಯ ಪೂನಾ ಹಾಗೂ ಬೆಂಗಳೂರು ಹೆದ್ದಾರಿಯಲ್ಲಿ ಘಟಪ್ರಭಾ ಸೇತುವೆಯನ್ನು ಯಾವಾಗ ಕಟ್ಟಲಾಯಿತು ಹಾಗೂ ಅದಕ್ಕೆ ತಗುಲಿದ ವೆಚ್ಚವೆಷ್ಟು?

(ಆ) ೧೯೫೬ನೇ ಇಸವಿಯ ರಾಷ್ಟ್ರೀಯ ಹೆದ್ದಾರಿಗಳ ಶಾಸನದ ೯ನೇ ನಿಯಮದ ಮೇರೆಗೆ ಸದರಿ ಸೇತುವೆಯ ಮೂಲಕ ಹಾದು ಹೋಗುವ ವಾಹನಗಳಿಗೆ ವಾಹನ ತೆರಿಗೆ ಅಥವಾ ಸುಂಕವನ್ನು ವಸೂಲು ಮಾಡಲಾಗುತ್ತಿದೆಯೇ?

(ಇ) ಈ ಬಾಬಿನಲ್ಲಿ ಪ್ರತಿದಿನ ವಸೂಲಾಗುವ ತೆರಿಗೆ ಅಥವಾ ಸುಂಕದ ಮೊತ್ತವೆಷ್ಟು? ಹಾಗೂ ಇದುವರೆಗೆ ಈ ವಸೂಲಾತಿಯಿಂದ ಬಂದಿರುವ ಒಟ್ಟು ಮೊತ್ತವೆಷ್ಟು?

(ಈ) ಈ ತೆರಿಗೆಯನ್ನು ಎಷ್ಟು ಕಾಲ ವಿಧಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ನಾಲ್ಕನೇ ಸಂಖ್ಯೆಯ ಪೂನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಸೇತುವೆಯು ದಿನಾಂಕ ೨೭ನೇ ಜೂನ್ ೧೯೭೭ರಂದು ಪೂರ್ಣಗೊಂಡು ವಾಹನ ಸಂಚಾರಕ್ಕೆ ತೆರವು ಮಾಡಲ್ಪಟ್ಟಿತು. ಈ ಸೇತುವೆಯ ನಿರ್ಮಾಣಕ್ಕೆ ತಗುಲಿದ ವೆಚ್ಚ (ಸೇತುವೆಯ ಕೂಡು ಹಾದಿಯ ನಿರ್ಮಾಣವೂ ಸೇರಿದಂತೆ) ರೂ. ೧,೩೨,೧೦,೮೦೩.

(ಆ) ಹೌದು. ರಾಷ್ಟ್ರೀಯ ಹೆದ್ದಾರಿ ಶಾಸನ (ತಿದ್ದುಪಡಿ) ೧೯೭೭ (೧೯೭೭ನೇ ಸಾಲಿನ ೩೦ನೇ ಶಾಸನ) ರಾಷ್ಟ್ರೀಯ ಹೆದ್ದಾರಿ (ಖಾಯಂ ಸೇತುವೆಗಳ ಉಪಯೋಗಕ್ಕೆ ವಿಧಿಸುವ ಶುಲ್ಕ) ನಿಯಮಾವಳಿ ೧೯೭೮ರ ಪ್ರಕಾರ ಸೇತುವೆ ಶುಲ್ಕವನ್ನು ಸೇತುವೆ ಮೂಲಕ ಹಾದು ಹೋಗುವ ವಾಹನಗಳಿಂದ ವಸೂಲಿ ಮಾಡಲಾಗುತ್ತಿದೆ.

(ಇ) ಈ ಬಾಬಿನಿಂದ ಪ್ರತಿದಿನ ವಸೂಲಾಗುವ ಸರಾಸರಿ ಶುಲ್ಕದ ಮೊತ್ತ ರೂ. ೧೭,೪೨೫ ದಿನಾಂಕ ೩೦ನೇ ಜೂನ್ ೧೯೮೫ರವರೆಗೆ ಒಟ್ಟು ೧,೯೨,೫೧,೩೪೭ ರೂ. ಗಳು ವಸೂಲಾಗಿದೆ.

(ಈ) ರಾಷ್ಟ್ರೀಯ ಹೆದ್ದಾರಿ ಶಾಸನ (ತಿದ್ದುಪಡಿ) ೧೯೭೭ರ ರೀತ್ಯಾ ಸೇತುವೆ ನಿರ್ಮಾಣಕ್ಕೆ ತಗಲುವ ಪೂರ್ಣ ವೆಚ್ಚ (ಸೇತುವೆಯ ಕೂಡು ಹಾದಿಯ ನಿರ್ಮಾಣವೂ ಸೇರಿದಂತೆ) ಅದರ ಮೇಲೆ ಶೇಕಡಾ ೧೮ ರಂತೆ ಬಡ್ಡಿ (ಶುಲ್ಕ ವಸೂಲಿ ಪ್ರಾರಂಭ ಮಾಡಿದ ದಿನದಿಂದ) ಶೇಕಡಾ ೧೨ ರಂತೆ ಶುಲ್ಕ ವಸೂಲಿ ಖರ್ಚು ಮತ್ತು ಸೇತುವೆ ಶುಲ್ಕ ವಸೂಲಿ ಕಟ್ಟಡದ ನಿರ್ಮಾಣದ ಖರ್ಚು ಇವೆಲ್ಲವೂ ವಸೂಲಾಗುವವರೆಗೆ ಸೇತುವೆ ಶುಲ್ಕ ವಸೂಲಿ ಮಾಡಲಾಗುವುದು. ಸದರಿ ಘಟಪ್ರಭಾ ಸೇತುವೆಯಲ್ಲಿ ಅಕ್ಟೋಬರ್ ೧೯೮೫ರ ವೇಳೆಗೆ ಪೂರ್ತಿ ಹಣ ವಸೂಲಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಜಮೀನುಗಳಲ್ಲಿರುವ ಮರಗಳಿಗೆ ಅರಣ್ಯ ಇಲಾಖೆಯವರು ಮಾಲ್ಕಿ ವಸೂಲು ವಿಧಿಸುತ್ತಿರುವುದು

೧೦೪ (೬೧೨) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(೧) ೧೯೭೨ಕ್ಕೆ ಹಿಂದೆ ಸಾಗುವಳಿಗೆ ಕೊಟ್ಟಿರುವ ಜಮೀನುಗಳಲ್ಲಿರುವ ಮರಗಳಿಗೆ ಮಾಲ್ಕಿ ವನ್ನು ವಸೂಲು ಮಾಡಲು ಅರಣ್ಯ ಇಲಾಖೆಗೆ ಅಧಿಕಾರವಿದೆಯೇ?

(೨) ಹಾಗಾದರೆ, ಹಲವು ದಶಕಗಳ ಹಿಂದೆ ಅರಣ್ಯ ಇಲಾಖೆಯವರು ಮಾಲ್ಕಿ ಇಲ್ಲವೆಂದು ಮಹಜರು ಮಾಡಿ ನಂತರ ದರಖಾಸ್ತು ಮೂಲಕ ಸಾಗುವಳಿ ಚೀಟಿ ನೀಡಿದ್ದ ಜಮೀನುಗಳಲ್ಲಿ ರೈತರು ಬೆಳೆಸಿದ ಹುಣಸೇಮರಗಳನ್ನು ಅರಣ್ಯಾಧಿಕಾರಿಗಳು ಹರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?